## ಕೇವಲ ಚಿತ್ರಗೀತೆಯೇ ಏಕೆ?

ಝೀ ಕನ್ನಡದಲ್ಲಿ ಪ್ರಸಾರವಾಗುತ್ತಿರುವ 'ಸರಿಗಮಪ' ತುಂಬಾ ಚೆನ್ನಾಗಿ ಮೂಡಿಬರುತ್ತಿದೆ. ಮಕ್ಕಳು ಒಬ್ಬರಿಗಿಂತ ಒಬ್ಬರು ತಮ್ಮ ಪ್ರತಿಭೆಯನ್ನು ತೋರಿಸುತ್ತಿದ್ದಾರೆ. ಆದರೆ ಬರೀ ಚಿತ್ರಗೀತೆಗಳನ್ನೇ ಹಾಡಿದರೆ, ಕೇಳಿ ಕೇಳಿ ಬೇಸರವಾಗುತ್ತದೆ. ಆದ್ದರಿಂದ ಭಾವ ಗೀತೆ, ಭಕ್ತಿ ಗೀತೆ, ಜನಪದ ಗೀತೆಗಳನ್ನು ಹಾಡಿಸಿದರೆ ಅವರ ಪ್ರತಿಭೆಗೆ ಹೆಚ್ಚಿನ ಪುರಸ್ಕಾರ ಸಿಕ್ಕಂತಾಗುತ್ತದೆ.

—ಆರ್. ಮಣಿಹಾರ, ಮೈಸೂರು

## ತೀರ್ಮಾನಕ್ಕೆ ಬರದ ಚೆಕ್‌ಬಂದಿ

ಪಬ್ಲಿಕ್ ಟಿವಿಯ 'ಚೆಕ್‌ಬಂದಿ' ಕಾರ್ಯಕ್ರಮದಲ್ಲಿ ವಿವಾದಾತ್ಮಕ ವಿಷಯಗಳ ಬಗ್ಗೆ ಚರ್ಚೆಯಾಗುವುದು, ವಿವಿಧ ಪಕ್ಷಗಳ/ ಸಂಘಗಳ ಪ್ರತಿನಿಧಿಗಳು ಭಾಗವಹಿಸಿ ಮಾತನಾಡುವುದು, ನಿರೂಪಕರ ಪ್ರಶ್ನೆಗಳು.. ಎಲ್ಲವೂ ನೋಡಲು ಚೆನ್ನಾಗಿರುತ್ತದೆ.

ಆದರೆ ಚರ್ಚೆ ಚರ್ಚೆಯಾಗಿಯೇ ಉಳಿದು ಯಾವುದೇ ತೀರ್ಮಾನ ಅಥವಾ ನಿರ್ಧಾರಕ್ಕೆ ಬರದಿರುವುದು ಬೇಸರ ಮೂಡಿಸುತ್ತದೆ. ರಂಗನಾಥ್‌ರವರು ಕಾರ್ಯಕ್ರಮದ ಕೊನೆಯ ಹತ್ತು ನಿಮಿಷವನ್ನು ಸೂಕ್ತವಾದ ರೀತಿಯಲ್ಲಿ ನಿರೂಪಿಸಿದರೆ 'ಚೆಕ್‌ಬಂದಿ' ಮತ್ತಷ್ಟು ಖುಷಿ ಕೊಡುತ್ತದೆ.

—ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ

## ವಾರದ ಪತ್ರ

## ಹಾಸ್ಯ ಪಾತ್ರಗಳು

ಉತ್ತರ ಕರ್ನಾಟಕದ ಸಾಮಾಜಿಕ ನಾಟಕಗಳಲ್ಲಿ ಒಂದು ಗಂಡು ಹಾಗೂ ಒಂದು ಹೆಣ್ಣು ಹೀಗೆ ಎರಡು ಹಾಸ್ಯ ಪಾತ್ರಗಳಿರುತ್ತವೆ. ದುಃಖದ ಸನ್ನಿವೇಶಗಳೇ ಹೆಚ್ಚಾಗಿರುವ ಸಾಮಾಜಿಕ ನಾಟಕಗಳಲ್ಲಿ ದುಃಖದ ತೀವ್ರತೆಯನ್ನು ಕಡಿಮೆಗೊಳಿಸಲು ಇಂತಹ ಪಾತ್ರಗಳು ಬೇಕು. ಆದರೆ ಇಂತಹ ಪಾತ್ರಗಳನ್ನು ಈಗ ನಾವು ಟಿ.ವಿ. ಧಾರಾವಾಹಿಗಳಲ್ಲಿ ಕಾಣುವಂತಾಗಿದೆ.

'ಅಗ್ನಿಸಾಕ್ಷಿ'ಯ ತನು ಹಾಗೂ 'ಪದ್ಮಾವತಿ'ಯ ಸುಪ್ರಭಾ ಅಂತಹ ಎರಡು ಪಾತ್ರಗಳು. ಚಂದ್ರಿಕಾ ಎಷ್ಟೇ ಬೈದರೂ ಕಪಾಳಕ್ಕೆ ಬಾರಿಸಿದರೂ ತನುಗೆ ಚಂದ್ರಿಕಾಳ ಸಹವಾಸವೇ ಬೇಕು. ಅದೇ ರೀತಿಯಲ್ಲಿ 'ಪದ್ಮಾವತಿ'ಯ ಸುಪ್ರಭಾಳಿಗೆ ಅಜ್ಜಿ ಅವಳ ಮುಖದ ಮೇಲೆ ಎಷ್ಟೇ ಉಗಿದರೂ ಕಪಾಳಮೋಕ್ಷ ಮಾಡಿದರೂ ಅವಳಿಗೆ ಅಜ್ಜಿಯ ಸಹವಾಸವೇ ಬೇಕು. ಮನೆಯವರ ಬಗ್ಗೆ ಚಾಡಿ ಹೇಳುವುದು, ಉಂಡ ಮನೆಗೆ ಕೇಡು ಬಗೆಯುವುದೇ ಇವರ ಕೆಲಸ. ಇವರಾಡುವ ಪೆದ್ದು ಪೆದ್ದು ಮಾತುಗಳು, ಅವರ ಹಾವಭಾವಗಳು, ಅವರ ವಿಚಿತ್ರ ವರ್ತನೆಗಳು ವೀಕ್ಷಕರಿಗೆ ನಗೆಯನ್ನು ಬರಿಸುತ್ತದೆ. ಇವರಿಗೆ ಸ್ವಾಭಿಮಾನ ಎಂಬುದೇ ಇಲ್ಲವೆ? ಒಂದು ರೀತಿಯಲ್ಲಿ ಇವು ಪರೋಪಜೀವಿಗಳು. ಇವರಿಗೆ ಸ್ವಂತ ಅಸ್ತಿತ್ವವೇ ಇಲ್ಲ. ಸರ್ಕಸ್ಸಿನ ಬಫೂನುಗಳಂತೆ ಕೇವಲ ಹಾಸ್ಯಕ್ಕಾಗಿ ಈ ಪಾತ್ರಗಳನ್ನು ಸೃಷ್ಟಿಸಿದಂತಿದೆ.

—ಮುರಲೀಧರ ಕುಲಕರ್ಣಿ, ಬೀದರ್

## ಶನಿಯಲ್ಲಿ ವಿಶೇಷ ಕಳೆ

ಕಲರ್ಸ್ ಕನ್ನಡ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ 'ಶನಿ' ಧಾರಾವಾಹಿಯ ಬಗ್ಗೆ ಸಾಕಷ್ಟು ಪ್ರತಿಕ್ರಿಯೆಗಳು 'ಜಾಣರ ಪೆಟ್ಟಿಗೆ'ಯಲ್ಲಿ ಬರುತ್ತಿರುವುದನ್ನು ಓದುತ್ತಿದ್ದೇವೆ. ಶನಿಯ ಮುಖದ ಮೇಲೆ ನೋಡುಗರಿಗೆ ಹೆದರಿಕೆ ಹುಟ್ಟಿಸುವಂತಹ ಕಳೆ ಯಾಕಿರಬೇಕು, ವೀಕ್ಷಕರು ನೋಡದೇ ಇರಲೆಂದೇ? ದೇವಸ್ಥಾನಗಳಲ್ಲಿ ರಥಾರೂಢನಾಗಿ ಕಾಕ ವಾಹನದ ಸಮೇತ ಶನಿದೇವ ದಿಗ್ವಿಜಯಕ್ಕೆ ಹೊರಟಂತೆ ಕಾಣುವ ಚಿತ್ರಗಳನ್ನು ನೋಡಿದ್ದೇವೆ. ಸರ್ವಾಂಗ ಸುಂದರನಲ್ಲದಿದ್ದರೂ ಗಾಂಭೀರ್ಯ, ಗತ್ತು ಅವನ ಮುಖದಲ್ಲಿ ವಿಶೇಷ ಕಳೆ ತುಂಬಿರುವುದನ್ನು ನೋಡಿದ್ದೇವೆ. ಧಾರಾವಾಹಿಯಲ್ಲಿ ಕೆಲವರ ವೇಷ–ಭೂಷಣಗಳು ಅಷ್ಟು ಸಮಂಜಸವಾಗಿಲ್ಲ ಎಂಬ ಮಾತು ನಿಜ. ಶನಿ ಪಾತ್ರಧಾರಿಯ ದನಿಯೂ ಪರಿಣಾಮಕಾರಿಯಾಗಿಲ್ಲ.

—ಬೆಳ್ಳಾವೆ ರಮೇಶ್; ಎಲ್. ಗಿರಿಜಾ ರಾಜ್, ಬೆಂಗಳೂರು

## ಮನಸ್ಸಿಗೆ ಮುದ ನೀಡುವ ಲಿಟ್ಲ್‌ಚಾಂಪ್

ಝೀ ಕನ್ನಡದಲ್ಲಿ ಪ್ರಸಾರವಾಗುತ್ತಿರುವ 'ಸರಿಗಮಪ ಲಿಟ್ಲ್ ಚಾಂಪ್' ಕಾರ್ಯಕ್ರಮ ತುಂಬಾ ಚೆನ್ನಾಗಿ ಮೂಡಿ ಬರುತ್ತಿದೆ. ಎಲ್ಲಾ ಮಕ್ಕಳು ಅತ್ಯದ್ಭುತವಾಗಿ ಹಾಡುತ್ತಿದ್ದಾರೆ. ನಾದಬ್ರಹ್ಮ ಹಂಸಲೇಖ ಅವರು ಪ್ರತೀ ಹಾಡಿನ ಬಗ್ಗೆ ಮಾಹಿತಿ ನೀಡುತ್ತಾ, ಹಾಡಿಗೆ ಸಂಬಂಧಿಸಿದ ಎಲ್ಲರನ್ನೂ ಸ್ಮರಿಸುತ್ತಾ, ಮಕ್ಕಳಿಗೂ ಕೂಡ ಉತ್ತಮ ಮಾರ್ಗದರ್ಶನ ನೀಡುತ್ತಾರೆ.

ಒಂದೇ ತರದ ಕಥೆಗಳುಳ್ಳ ಧಾರಾವಾಹಿಗಳು ಹಾಗೂ ಎಲ್ಲವನ್ನೂ ಬ್ರೇಕಿಂಗ್ ನ್ಯೂಸ್ ಎನ್ನುವ ನ್ಯೂಸ್ ಚಾನೆಲ್‌ಗಳನ್ನು ನೋಡಿ ನೋಡಿ ಬೇಸತ್ತವರಿಗೆ ಈ ಕಾರ್ಯಕ್ರಮ ಮನಸ್ಸಿಗೆ ಮುದ ನೀಡುತ್ತದೆ.

—ರಾಘವೇಂದ್ರ ಜೋಯ್ಸ್, ಮೈಸೂರು;
ಮೀನಾಕ್ಷಿ ಕೆ. ರಾಮಗುಂಡಿ, ಬೈಲಹೊಂಗಲ

## ಅತಿರೇಕದ ವರ್ತನೆ

11.2.18ನೇ ಭಾನುವಾರ ರಾತ್ರಿ 9ಕ್ಕೆ 'ಕಲರ್ಸ್ ಕನ್ನಡ' ವಾಹಿನಿಯಲ್ಲಿ, ಪ್ರಸಾರವಾದ 'ಫ್ಯಾಮಿಲಿ ಪವರ್' ಕಾರ್ಯಕ್ರಮದಲ್ಲಿ ಎರಡೂ ತಂಡಗಳ, ಹಲವು ಸದಸ್ಯರ ವರ್ತನೆ, ಸಂಯಮವನ್ನು ಮೀರಿತು ಎನ್ನಬಹುದು. ಸ್ಪರ್ಧೆಯ ವೇದಿಕೆ ಮೇಲೆ, ಸರಿಯುತ್ತರ ನೀಡುವ ಹಾಗೂ ಪಾಯಿಂಟ್ ಗಳಿಸಬೇಕೆಂಬ ಉತ್ಸುಕತೆಯಲ್ಲಿ ಶಿಸ್ತು, ಸಂಯಮ, ಸರಿಯಾದ ನಡೆ ಪಾಲಿಸಲಿಲ್ಲವೆಂಬುದು ನನ್ನ ಅನಿಸಿಕೆ. ಹಲವು ಸದಸ್ಯರ ಅರಚಾಟ, ಕೂಗಾಟ, ಮಿತಿಮೀರಿದ ಮಾತುಗಳು, ವೀಕ್ಷಕರಿಗೆ ಮುಜುಗರ ಮಾಡಿರಬಹುದು. ಇನ್ನು ಮುಂದಾದರೂ ವಾಹಿನಿ ಸ್ಪರ್ಧಾಳುಗಳಿಗೆ ಈ ಬಗ್ಗೆ ಸೂಕ್ತ ಸೂಚನೆ ನೀಡಲಿ.

—ಸುಂದರ್, ಬೆಂಗಳೂರು

## ಅಮರ ಮಧುರ ಪ್ರೇಮ..

ಚಂದನ ವಾಹಿನಿಯಲ್ಲಿ ಕನ್ನಡ ಚಿತ್ರ ಗೀತೆಗಳ 'ಮಧುರ ಮಧುರವೀ ಮಂಜುಳಗಾನ'ದಂತೆ ಆಯುಷ್ ಟಿ.ವಿ. ತನ್ನ ಚಾನೆಲ್‌ನಲ್ಲಿ ಆಯುಷ್ ಮ್ಯೂಸಿಕ್ ಅಂತ 'ಅಮರ ಮಧುರ ಪ್ರೇಮ' ಕಾರ್ಯಕ್ರಮ ಪ್ರಸಾರ ಮಾಡುತ್ತಿದೆ. ಕನ್ನಡ ಚಿತ್ರಗೀತೆಗಳ ಇದು ಸಂಜೆ 4.30 ರಿಂದ 5.00ರ ವರೆಗೆಪ್ರಸಾರವಾಗುತ್ತದೆ. ಯುವ ಪ್ರತಿಭೆಗಳು ಭಾಗವಹಿಸಿ 60–80ರ ದಶಕದ ಕನ್ನಡ ಚಿತ್ರಗೀತೆಗಳನ್ನು ಹಾಡುತ್ತಾರೆ. ಇದನ್ನು ಕೇಳುವುದೇ ಸೊಗಸು.

—ಬಿ.ಎಸ್. ರಮೇಶ್, ಉಡುಪಿ

## 'ಚುಟುಕು ಸುದ್ದಿ' ನಿಲ್ಲಿಸದಿರಿ

ಕನ್ನಡ ವಾಹಿನಿಗಳಲ್ಲಿ ಬೆಳಿಗ್ಗೆ 'ಚುಟುಕು ಸುದ್ದಿ'ಗಳು ಪ್ರಸಾರವಾಗುತ್ತಿವೆ. ದೇಶ, ವಿದೇಶ, ಕ್ರೀಡೆ, ಚಿತ್ರ ರಂಗದ ಸುದ್ದಿಗಳ ಸಂಗಡದ ಚುಟುಕು ಸುದ್ದಿಗಳು ತುಂಬಾ ಖುಷಿ ಕೊಡುತ್ತವೆ. ಸುಮಾರು 40– 50 ಸುದ್ದಿಗಳು 10– 15 ನಿಮಿಷಗಳಲ್ಲಿ ಪ್ರಸಾರವಾಗುವ ಈ ಚುಟುಕು ಸುದ್ದಿ ಪ್ರೇಕ್ಷಕರ ಮನ ಗೆದ್ದಿದೆ.

ಆದರೆ ಕೆಲವೊಮ್ಮೆ ಇದು ಪ್ರಸಾರವಾಗುವುದಿಲ್ಲ. ಇದರಿಂದ ಅಭಿಮಾನಿಗಳಿಗೆ ಬೇಸರವಾಗುತ್ತಿದೆ. ಅಲ್ಲದೇ ರಾತ್ರಿ ಕೂಡ ವಾಹಿನಿಗಳು ಇಂತಹ 'ಚುಟುಕು ಸುದ್ದಿ'ಗಳನ್ನು ಹೆಚ್ಚು ಪ್ರಸಾರ ಮಾಡಿದರೆ ವೀಕ್ಷಕರಿಗೂ ಅನುಕೂಲವಾಗುತ್ತದೆ.

—ಎಸ್. ನರೇಂದ್ರ ನಾಯಕ್, ಗಂಗೊಳ್ಳಿ